ಸಿಸಿ ಸಂಖ್ಯೆಃ 25/2021
ಡಿಡಬ್ಲ್ಯೂಃ 01
ದಿನಾಂಕಃ 10.08.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ದೂರುದಾರರ ಪರ ಶ್ರೀಮತಿ ಡಿ ಬಿ ಸಿ ರವರಿಂದ.**

ನನಗೆ ದೂರುದಾರನ ಪರಿಚಯ ಇಲ್ಲ. ದೂರುದಾರ ಪರಿಚಯ ಇದ್ದರೂ ಸಹ ಇಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆಸಿರುವ ಸಂಗತಿ ಕುರಿತು ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ. ಸಾಕ್ಷಿಗೆ ಮುಖ್ಯ ವಿಚಾರಣೆ ಪ್ರಮಾಣಪತ್ರ ತೋರಿಸಿ ಸಹಿ ಗುರುತಿಸಲು ಕೇಳಿದಾಗ ಅದರಲ್ಲಿರುವ ಸಹಿ ತನ್ನದೇ ಅಂತಾ ಗುರುತಿಸಿರುತ್ತಾರೆ.

ಸಾಕ್ಷಿಗೆ ನಿಪಿ-1 ಚೆಕ್ಕನ್ನು ತೋರಿಸಿ ಸಹಿ ಯಾರದು ಅಂತಾ ಕೇಳಿದಾಗ ಸದರಿ ಸಹಿ ತನ್ನದಲ್ಲ ಅಂತಾ ನಿರಾಕರಿಸಿರುತ್ತಾರೆ. ಸಾಕ್ಷಿ ಸ್ವತಃ ಸದರಿ ಚೆಕ್ಕ ಮೇಲೆ ಇರುವ ಬರಹ ನನ್ನ ಅಳಿಯ ಷಣ್ಮುಖಗೌಡ ಪಟ್ಟಣಶೆಟ್ಟಿ ಇತನದು ಇರುತ್ತದೆ, ಸಹಿ ಕೂಡಾ ಆತನೇ ಮಾಡಿರುತ್ತಾನೆ ಅಂತಾ ನುಡಿಯುತ್ತಾರೆ.

ಸದರಿ ನಿಪಿ-1 ಚೆಕ್ ನನ್ನದೇ ಇರುತ್ತದೆ. ಷಣ್ಮುಖಗೌಡ 2017-18 ರಲ್ಲಿ 14 ಚೆಕ್ಕುಗಳನ್ನು ಕಳುವು ಮಾಡಿರುತ್ತಾನೆ ಅವುಗಳ ಪೈಕಿ ಇದು ಒಂದು ಆಗಿರುತ್ತದೆ. ನಿಪಿ-1 ರ ಮೇಲಿರುವ ಸಹಿ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿರುವ ಸಹಿ ಒಂದೇ ಆಗಿರುತ್ತವೆ ಎಂದರೆ ಸರಿಯಲ್ಲ, ಬೇರೆ ಆಗಿರುತ್ತವೆ. ಪ್ರಮಾಣಪತ್ರದಲ್ಲಿರುವ ಸಹಿ ಚಿಕ್ಕದು ಇರುತ್ತದೆ, ನಿಪಿ-1 ರಲ್ಲಿರುವ ಸಹಿ ದೊಡ್ಡದು ಇರುತ್ತದೆ, ಎರಡು ಸಹಿಗಳು ನನ್ನದೇ ಇರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಗೆ ಆತನ ವಕಾಲತ್ತುನಾಮಾ ತೋರಿಸಿ ಸಹಿ ಗುರುತಿಸಲು ಕೇಳಿದಾಗ ತಮ್ಮದೇ ಅಂತಾ ಒಪ್ಪಿಕೊಂಡಿರುತ್ತಾರೆ. ನಿಪಿ-1 ಚೆಕ್ ಮೇಲಿನ ಸಹಿ ಮತ್ತು ವಕಾಲತ್‌ನಲ್ಲಿರುವ ಸಹಿ ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. ಹಣ ಕೊಡಬೇಕಾಗುತ್ತದೆ ಅಂತಾ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ಮತ್ತು ಫಿರ್ಯಾದಿದಾರನಿಗೂ ಮೊದಲಿನಿಂದಲೂ ಹಣ ತೆಗೆದುಕೊಳ್ಳುವ ಕೊಡುವ ವ್ಯವಹಾರ ಇತ್ತು ಎಂದರೆ ಸರಿಯಲ್ಲ. ಫಿರ್ಯಾದಿದಾರ ಯಾರು ಅಂತಾ ನನಗೆ ಪರಿಚಯವೇ ಇಲ್ಲ. ಆತ ಪರಿಚಯ ಇದ್ದರೂ ಇಲ್ಲ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಆತನನ್ನು ನ್ಯಾಯಾಲಯದಲ್ಲಿಯೇ ಮೊದಲ ಬಾರಿಗೆ ನೋಡಿದ್ದೇನೆ ಅಂತಾ ನುಡಿಯುತ್ತಾರೆ. ಫಿರ್ಯಾದಿದಾರ ಆಸ್ತಿವಂತ ಇರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಆತನ ಹತ್ತಿರ ನಾನು

ಮೇಲಿಂದ ಮೇಲೆ ಹಣ ಪಡೆದುಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ನಾನು ಆತನ ಹತ್ತಿರ ಅಡಚಣೆಗಾಗಿ 3 ಲಕ್ಷ ಹಣ ತೆಗೆದುಕೊಂಡು ಮರಳಿ ಕೇಳಿದಾಗ ನಿಪಿ-1 ಚೆಕ್ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. 2017-18 ರಲ್ಲಿ ನನ್ನ ಫ್ಯಾಕ್ಟರಿ ಸೀಜ್ ಆಗಿತ್ತು, ಆಗ ಷಣ್ಮುಖಗೌಡ ನನ್ನ ಚೆಕ್ಕುಗಳನ್ನು ಕಳುವು ಮಾಡಿಕೊಂಡು ಪಿರ್ಯಾದಿದಾರನ ಕಡೆಯಿಂದ ಈ ಸುಳ್ಳು ದಾಖಲಿಸಿರುತ್ತಾನೆ ಮತ್ತು ಆತನೂ ಸಹ ಒಂದು ದೂರು ದಾಖಲಿಸಿರುತ್ತಾನೆ, ಪಿರ್ಯಾದಿ ಜೊತೆ ನಾನು ಯಾವುದೇ ವ್ಯವಹಾರ ಮಾಡಿಲ್ಲ, ಚೆಕ್ ನೀಡಿಲ್ಲ.

ನಾನು ಚಹಾಪುಡಿ ಮತ್ತು ಕ್ಯಾಂಡಿ ತಯಾರಿಸುವ ಫ್ಯಾಕ್ಟರಿ ನಡೆಸುತ್ತಿದ್ದೆ ಎಂದರೆ ಸರಿ. ನನಗೆ 2018-19 ರಲ್ಲಿ ಫ್ಯಾಕ್ಟರಿ ಹಾನಿಯಾಗಿತ್ತು ಆದ್ದರಿಂದ ಪಿರ್ಯಾದಿದಾರನ ಕಡೆ ಸಾಲ ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ ನಾನು ಬ್ಯಾಂಕಿನಿಂದ ಸಾಲ ಪಡೆದಿದ್ದೆ, ನನ್ನ ಫ್ಯಾಕ್ಟರಿ ಸಹ ಬ್ಯಾಂಕನವರು ಸೀಜ್ ಮಾಡಿದ್ದರು, ಆದರೆ ನಾನು ಆ ಪಿರ್ಯಾದಿದಾರನ ಕಡೆಯಿಂದಾಗಲೀ ಅಥವಾ ಯಾರ ಕಡೆಯಿಂದಾಗಲೀ ಸಾಲ ಪಡೆದಿಲ್ಲ.

ಶ್ರೀರಾಮ ಫೈನಾನ್ಸದವರು ನನ್ನ ಮನೆ ಸೀಜ್ ಮಾಡಿದ್ದರು ಎಂದರೆ ಸರಿ, ನಾನು ಅಲ್ಲಿ ಸಾಲ ಪಡೆದಿದ್ದೆ ಬಾಕಿ ಇತ್ತು ಆದ್ದರಿಂದ ಮಾಡಿದ್ದರು. ನನ್ನ ಹೆಂಡತಿ ತವರುಮನೆ ಮೆಳ್ಳಾಗಟ್ಟಿ ಎಂದರೆ ಸರಿ. ಪಿರ್ಯಾದಿದಾರನ ಊರು ಅದೇ ಎಂದರೆ ನನಗೆ ಗೊತ್ತಿಲ್ಲ. ಆತನ ಪರಿಚಯ ಇಲ್ಲ. ಪಿರ್ಯಾದಿದಾರ ನನ್ನ ಸಂಬಂಧಿಕ ಎಂದರೆ ಸರಿಯಲ್ಲ. ನಾನು ಚೆಕ್ ಕಳೆದಿರುವುದಾಗಿ ಶಿಗ್ಗಾಂವ ಪೋಲಿಸ್ ಠಾಣೆಯಲ್ಲಿ ದೂರು ನೀಡಿದ್ದೆ. ನಿಡಿ-9 ನಾನು ನೀಡಿರುವ ದೂರು ಎಂದರೆ ಸರಿ. ನಿಡಿ-9 ರಲ್ಲಿ ಚೆಕ್ ನಂ.357461 ನಿಂದ 35467 ವರೆಗಿನ ಚೆಕ್ ಗಳು ಕಳೆದಿರುತ್ತವೆ ಅಂತಾ ದೂರು ನೀಡಿದ್ದೆ ಎಂದರೆ ಸರಿ. ಸದರಿ ಚೆಕ್ ಗಳು ನನ್ನ ಕರೆಂಟ್ ಅಕೌಂಟನ ಚೆಕ್‌ಗಳಾಗಿದ್ದವು. ನಿಪಿ-1 ಚೆಕ್ ಮತ್ತು ಷಣ್ಮುಖಗೌಡ ಹಾಕಿರುವ ಚೆಕ್ ನನ್ನ ವಯಕ್ತಿಕ ಖಾತೆಯ ಚೆಕ್‌ಗಳಾಗಿರುತ್ತವೆ ಅವುಗಳನ್ನು ಯಾವಾಗ ಕಳ್ಳತನ ಮಾಡಿರುತ್ತಾನೆ ನನಗೆ ಗೊತ್ತಾಗಿಲ್ಲ ಆದ್ದರಿಂದ ದೂರು ನೀಡಿಲ್ಲ. ನನ್ನ ವಯಕ್ತಿಕ ಖಾತೆಯ ಚೆಕ್ ಗಳನ್ನು ಮತ್ತು ಕರೆಂಟ್ ಅಕೌಂಟ ಸೇರಿ 14 ಚೆಕ್‌ಗಳನ್ನು ಕಳ್ಳತನ ಮಾಡಿರುತ್ತಾನೆ. ನನ್ನ ವಯಕ್ತಿಕ ಎಸ್ ಬಿ ಖಾತೆಯ ಚೆಕ್ ಗಳು ಕಳ್ಳತನ ಆಗಿದ್ದು ಈ ಎರಡು ಪ್ರಕರಣದಲ್ಲಿ ನೋಟಿಸು ಬಂದ ಮೇಲೆಯೇ ಗೊತ್ತಾಗಿರುತ್ತದೆ. ನೋಟಿಸು ಸಹ ನನಗೆ ತಲುಪಿಲ್ಲ, ನಾನು ಹುಬ್ಬಳ್ಳಿಯಲ್ಲಿ ವಾಸಿಸುತ್ತಿದ್ದೆ, ಪೋಲಿಸರು ಫೋನ್ ಮಾಡಿ ತಿಳಿಸಿದ ನಂತರ ಪ್ರಕರಣಗಳ ಬಗ್ಗೆ ಗೊತ್ತಾಗಿರುತ್ತದೆ. ನ್ಯಾಯಾಲಯದಲ್ಲಿ ದೂರು ಇದ್ದುದ್ದರಿಂದ ಸದರಿ ಚೆಕ್‌ಗಳ ಕುರಿತು ದೂರು ಕೊಡಲಿಲ್ಲ. ಸಹಿ ನನ್ನದೇ ಅಂತಾ ಒಪ್ಪಿಕೊಂಡರೆ ಹಣ ಕೊಡಬೇಕಾಗುತ್ತದೆ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚೆಕ್ ನಂ.357465 ಚೆಕ್ಕನ್ನು ವಿಜಯಕುಮಾರ ಬಾಬಣ್ಣ ಇವರಿಗೆ ಕೊಟ್ಟಿದ್ದೆ ಎಂದರೆ ಸರಿಯಲ್ಲ

ಅದನ್ನು ಸಹ ನನ್ನ ಅಳಿಯ ಹಾಕಿಸಿದ್ದ. ಎಲ್ಲವನ್ನು ನನ್ನ ಅಳಿಯ ಹಾಕಿಸಿದ್ದ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅದರಲ್ಲಿ ಹಣ ಕೊಟ್ಟು ರಾಜೀ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಸಹಿ ಮಾಡಿ ಯಾವತ್ತು ಚೆಕ್ಕುಗಳನ್ನು ಇಟ್ಟಿಲ್ಲ. ನಾನು ಚೆಕ್ಕುಗಳನ್ನು ಸಹಿ ಮಾಡಿ ಇಟ್ಟಿದ್ದೆ ಆಗ ನನಗೆ ಪಾರ್ಶ್ವವಾಯು ಹೊಡೆದಿತ್ತು ಎಂದರೆ ಸರಿಯಲ್ಲ. ಪಾರ್ಶ್ವವಾಯು ಹೊಡೆದಿತ್ತು ಆದರೆ ನಾನು ಸಹಿ ಮಾಡಿ ಯಾವುದೇ ಚೆಕ್ಕುಗಳನ್ನು ಇಟ್ಟಿಲ್ಲ. ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರುದಾರನಿಗೆ ನಿಪಿ-1 ಚೆಕ್ ಕೊಟ್ಟಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು. ಸವಣೂರು.